ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ
ನ್ಯಾಯಾಲಯದಲ್ಲಿ, ಧಾರವಾಡ

ಸಿ.ಸಿ. ನಂಬರ್ಃ **3532/2022**

| | |
|---|---|
| ಸಾಕ್ಷಿಯ ಹೆಸರು | : ಮುಕ್ತಿಯಾರ |
| ತಂದೆಯ ಹೆಸರು | : ಬಾಬುಸಾಬ ನವಲೂರು |
| ವಯಸ್ಸು | : 45 ವರ್ಷ |
| ಉದ್ಯೋಗ | : ಆಟೋಚಾಲಕ |
| ವಾಸಸ್ಥಳ | : ಕಲಾಭವನ, ಧಾರವಾಡ |

ದಿಃ **16-02-2024** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ದಿಃ23-11-2021 ರಂದು ರಾತ್ರಿ 8.00 ಗಂಟೆಗೆ ನಾನು ಕಲಾಭವನ ಗೇಟ್ ಹತ್ತಿರ ಬಂದು ನಿಂತಾಗ ಆರೋಪಿತನು ಒಂದು ಬಡಿಗೆಯನ್ನು ತಂದು ಅಲ್ಲಿ ಕುಂತಂತಹ ವ್ಯಕ್ತಿಗಳಿಗೆ ಎಬಿಸಿ ಕಳುಹಿಸುತ್ತಿದ್ದನು. ಆ ನಂತರ ನನಗೆ ಸಪ್ಪಳ ಕೇಳಿ ಬಂತು. ಅಜೀಜ್ ರವರು ಕೆಳಗೆ ಬಿದ್ದರು. ಆತನನ್ನು ನೋಡಲಾಗಿ ರಕ್ತ ಬರುತ್ತಿತ್ತು. ನಾನು ಅಜೀಜ್ ನನ್ನು ದವಾಖಾನೆಗೆ ತೆಗೆದುಕೊಂಡು ಹೋಗಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತನು ಓಡಿ ಹೋಗುತ್ತಿದ್ದನು. ನಾನು ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಇಷ್ಟನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಿ.ಸಿ. ನಂಬರ್ಃ **3532/2022**
ಸಿ.ಡಬ್ಲ್ಯು: **4** ಪಿ.ಡಬ್ಲ್ಯು: **2**

ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಮುಖ್ಯವಿಚಾರಣೆಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.　　　　　ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.